ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೦೨**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಇಪ್ಪತ್ತಾರನೆಯ ಅಧಿವೇಶನ**

**ಬುಧವಾರ, ದಿನಾಂಕ: ೧೦ನೇ ಡಿಸೆಂಬರ್, ೨೦೧೪**

---

**ಸಮೂಹ – III**

೧. ಅರಣ್ಯ ಸಚಿವರು
೨. ಕಂದಾಯ ಸಚಿವರು
೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು
೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು
೫. ಸಣ್ಣ ನೀರಾವರಿ ಸಚಿವರು
೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು
೭. ಕಾರ್ಮಿಕ ರಾಜ್ಯ ಸಚಿವರು

---

## ಐ.ಟಿ.ಐ. ಕಾಲೇಜುಗಳು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೧೬ (೩೭೨) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬಿಜಾಪೂರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿರುವ ಐ.ಟಿ.ಐ. ಕಾಲೇಜುಗಳ ಹೆಸರು, ವಿಳಾಸ ಮತ್ತು ಅವು ಆರಂಭವಾದ ವರ್ಷ ಹಾಗೂ ಈ ಕಾಲೇಜುಗಳಲ್ಲಿ ನಡೆಯುತ್ತಿರುವ ಕೋರ್ಸ್ (ವಿಭಾಗಗಳ) ಗಳ ಸಂಪೂರ್ಣ ವಿವರಣೆ ನೀಡುವುದು ;

(ಆ) ಇವುಗಳನ್ನು ಅನುದಾನಕ್ಕೊಳಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ;

(ಇ) ಈ ನಿಟ್ಟಿನಲ್ಲಿ ಸರ್ಕಾರದ ಚಿಂತನೆ ಮತ್ತು ಕ್ರಮವೇನು ?

## ೧೧–ಇ ಸ್ಕೆಚ್ ಅರ್ಜಿಗಳ ವಿಲೇವಾರಿ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) –**

೧೭ (೩೬೮) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೧೧–ಇ ಸ್ಕೆಚ್‌ಗಾಗಿ ಶುಲ್ಕ ಪಾವತಿಸಿ, ಅರ್ಜಿ ಸಲ್ಲಿಸಿರುವ ಭೂ ಮಾಲೀಕರ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ೧೧–ಇ ಸ್ಕೆಚ್‌ನ್ನು ವಿಲೇವಾರಿ ಮಾಡಲು ಕಾಲಮಿತಿ ನಿಗದಿಪಡಿಸಲಾಗಿದೆಯೇ; (ವಿವರ ನೀಡುವುದು)

(ಇ) ಒಂದು ೧೧–ಇ ಸ್ಕೆಚ್‌ಗಾಗಿ ಎಷ್ಟು ಶುಲ್ಕ ನಿಗದಿಪಡಿಸಲಾಗಿದೆ ; ಈ ಶುಲ್ಕವು ಯಾವ ದಿನಾಂಕದಿಂದ ಜಾರಿಯಲ್ಲಿದೆ ;

(ಈ) ಎಷ್ಟು ಸಮಯದಿಂದ ಈ ಅರ್ಜಿಗಳು ವಿಲೇವಾರಿಯಾಗದೆ ಬಾಕಿ ಇವೆ ;

(ಉ) ನಿಗದಿತ ಅವಧಿಯಲ್ಲಿ ೧೧–ಇ ಸ್ಕೆಚ್ ಸಿಗದೆ ಇರುವುದರಿಂದ ಭೂ ಮಾಲೀಕರಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಬಂದಿದ್ದಲ್ಲಿ, ಬಾಕಿ ಇರುವ ಅರ್ಜಿಗಳನ್ನು ವಿಲೇವಾರಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಹೊಸ ತಾಲ್ಲೂಕುಗಳು ರಚನೆಯಾಗದೇ ಇರುವುದು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೮ (೩೫೫) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹೊಸ ತಾಲ್ಲೂಕುಗಳನ್ನು ಘೋಷಿಸಿ ೨ ವರ್ಷ ಕಳೆದರೂ ತಾಲ್ಲೂಕು ರಚನೆಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈಗಾಗಲೇ ಘೋಷಿಸಿರುವ ಹೊಸ ತಾಲ್ಲೂಕುಗಳು ಎಷ್ಟು ; ಅವುಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಆಡಳಿತ ಪ್ರಾರಂಭಿಸಿದ ತಾಲ್ಲೂಕುಗಳು ಎಷ್ಟು ; ಇನ್ನೂ ಅನುಷ್ಠಾನಗೊಳ್ಳ ಬೇಕಾದ ತಾಲ್ಲೂಕುಗಳು ಎಷ್ಟು ;

(ಇ) ಅನುಷ್ಠಾನಗೊಳಿಸಬೇಕಾದ ತಾಲ್ಲೂಕುಗಳನ್ನು ಯಾವ ಕಾಲಮಿತಿಯಲ್ಲಿ ಜಾರಿಗೆ ತರಲಾಗುವುದು ?

## ಮಳಲೂರು ಏತ ನೀರಾವರಿ

**ಶ್ರೀಮತಿ ಎ.ವಿ. ಗಾಯತ್ರಿ ಶಾಂತೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೯ (೪೩೬) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಚಿಕ್ಕಮಗಳೂರು ತಾಲ್ಲೂಕಿನ ಮಳಲೂರು ಸಮೀಪದ ಮಳಲೂರು ಏತ ನೀರಾವರಿ ಯೋಜನೆ ಕಾಮಗಾರಿ ಯಾವ ವರ್ಷದಲ್ಲಿ ಪ್ರಾರಂಭವಾಯಿತು;

(ಆ) ಈ ಯೋಜನೆಗೆ ಇಲ್ಲಿಯವರೆಗೆ ಎಷ್ಟು ಅನುದಾನ ವೆಚ್ಚ ಮಾಡಲಾಗಿದೆ; ಇನ್ನು ಎಷ್ಟು ಅನುದಾನದ ಅಗತ್ಯವಿದೆ ;

(ಇ) ಕಾಮಗಾರಿ ನೆನಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಬಂದಿದ್ದರೆ, ಏನು ಕ್ರಮ ಕೈಗೊಳ್ಳಲಾಗಿದೆ ;

(ಉ) ಈ ಯೋಜನೆಯ ಕಾಮಗಾರಿ ಪೂರ್ಣಗೊಂಡು ಕೆರೆಗಳಿಗೆ ನೀರು ಹರಿಯಲು ಎಷ್ಟು ಸಮಯ ಬೇಕಾಗುತ್ತದೆ ?

## ಅತಿವೃಷ್ಟಿಯಿಂದಾದ ನಷ್ಟ : ರೈತರಿಗೆ ಪರಿಹಾರ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೨೦ (೩೫೩) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕಳೆದ ಆಗಸ್ಟ್, ಸೆಪ್ಟೆಂಬರ್ ತಿಂಗಳಲ್ಲಿ ಸುರಿದ ಭಾರಿ ಮಳೆಯಿಂದ ಪ್ರವಾಹ ಉಂಟಾಗಿ ರೈತರ ಮನೆ ಹಾಗೂ ಬೆಳೆಗಳ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ತಾಲ್ಲೂಕುವಾರು, ಗ್ರಾಮವಾರು ಮಣ್ಣು ಕೊಚ್ಚಿಹೋಗಿರುವ ಹೊಲಗಳ ಹಾಗೂ ಬೆಳೆಗಳ ಎಕರೆವಾರು, ಹಾನಿಉಂಟಾದ ಮನೆಗಳ ಸಂಖ್ಯೆ ಹಾಗೂ ಸಂತ್ರಸ್ಥರ ಪ್ರತ್ಯೇಕ ಮಾಹಿತಿ ನೀಡುವುದು ;

(ಆ) ಈ ನಿಟ್ಟಿನಲ್ಲಿ ನಿಗದಿಪಡಿಸಿದ ಪರಿಹಾರ ಮೊತ್ತ ಎಷ್ಟು ; ವಿತರಿಸಿದ ಪರಿಹಾರ ಮೊತ್ತ ಎಷ್ಟು ;

(ಇ) ಈ ನಿಟ್ಟಿನಲ್ಲಿ ಇಲಾಖೆಯು ಕೈಗೊಂಡಿರುವ ಸಮೀಕ್ಷೆಯಲ್ಲಿ ಲೋಪ ದೋಷಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ನೀಡಲಾದ ಪರಿಹಾರ ಮೊತ್ತ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಈ ಲೋಪದೋಷಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಸರ್ಕಾರದ ಮುಂದಿರುವ ಕ್ರಮಗಳೇನು ; ಯಾವ ಕಾಲಮಿತಿಯೊಳಗೆ ಇದನ್ನು ಸರಿಪಡಿಸಲಾಗುವುದು ?

## 'ಬೆಣ್ಣೆ ತೊರೆ' 'ಕಾರಂಜ' ನೀರಾವರಿ ಯೋಜನೆಗಳು

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) –**

೨೧ (೨೫೯) ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) 'ಬೆಣ್ಣೆ ತೊರೆ' 'ಕಾರಂಜ' ಒಳಗೊಂಡಂತೆ ಹೈದರಾಬಾದ್–ಕರ್ನಾಟಕ ಜಿಲ್ಲೆಗಳಲ್ಲಿ ಯಾವ್ಯಾವ ನೀರಾವರಿ ಯೋಜನೆಗಳನ್ನು ರೂಪಿಸಲಾಗಿದೆ ; ಪ್ರತಿ ಯೋಜನೆಯ ಪ್ರಾರಂಭದ ವರ್ಷ, ನೀರಾವರಿ ಸೌಲಭ್ಯದ ವ್ಯಾಪ್ತಿ, ಕಾಮಗಾರಿಗಳ ಪ್ರಗತಿ, ವಿಳಂಬಕ್ಕೆ ಕಾರಣಗಳು, ಈವರೆಗೆ ವ್ಯಯ ಮಾಡಿದ ಹಣ, ಹಣ ದುರುಪಯೋಗದ ಅವ್ಯವಹಾರಗಳು, ಇತ್ಯಾದಿ ವಿವರಗಳ ಸಂಕ್ಷಿಪ್ತ ಪರಿಚಯಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ನೀಡುವುದು ;

(ಆ) ಬಹಳಷ್ಟು ಕಾಮಗಾರಿಗಳು ವಿಳಂಬವಾಗಿ, ಸರ್ಕಾರಿ ಹಣ ಪೋಲಾಗುತ್ತಿರುವ ಬಗ್ಗೆ ಸಾರ್ವಜನಿಕರು ತೀವ್ರ ಅಸಮಾದಾನಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಅಥವಾ ಬಾರದಿದ್ದಲ್ಲಿ, ಕುಂಠಿತಗೊಂಡಿರುವ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು ? (ಪ್ರತಿ ಯೋಜನೆವಾರು ವಿವರ ನೀಡುವುದು)

## ಗಾರ್ಮೆಂಟ್ಸ್ ಸ್ಥಾಪನೆ

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) –**

೨೨ (೪೨೯) ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಉತ್ತರ ಕರ್ನಾಟಕ ಮತ್ತು ಹೈದರಾಬಾದ್–ಕರ್ನಾಟಕ ಜಿಲ್ಲೆಗಳಲ್ಲಿ ಬೃಹತ್ ಪ್ರಮಾಣದ ಗಾರ್ಮೆಂಟ್ಸ್ ಕಾರ್ಖಾನೆಗಳು ಎಷ್ಟಿವೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ರಾಜಧಾನಿ ಬೆಂಗಳೂರು ಸುತ್ತಮುತ್ತ ಕೇಂದ್ರಿಕೃತವಾಗಿರುವ ಗಾರ್ಮೆಂಟ್ಸ್ ಕಾರ್ಖಾನೆಗಳನ್ನು ಸ್ಥಳಾಂತರಿಸಲು ಅಥವಾ ಈ ಜಿಲ್ಲೆಗಳಲ್ಲಿ ಮತ್ತಷ್ಟು ಗಾರ್ಮೆಂಟ್ಸ್ ಕಾರ್ಖಾನೆಗಳನ್ನು ಸ್ಥಾಪಿಸಲು ಅಥವಾ ಖಾಸಗಿಯವರನ್ನು ಕರೆತರಲು ಸರ್ಕಾರ ಪ್ರಯತ್ನಿಸುವುದೇ ;

(ಇ) ಈ ಜಿಲ್ಲೆಗಳಲ್ಲಿ ಮಹಿಳೆಯರಿಗೆ ಟೈಲರಿಂಗ್ ತರಬೇತಿ ನೀಡಲು ತರಬೇತಿ ಕೇಂದ್ರಗಳು ಎಷ್ಟಿವೆ ; ಮತ್ತಷ್ಟು ತರಬೇತಿ ಕೇಂದ್ರಗಳನ್ನು ತೆರೆಯಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಈ) ಜವಳಿ ಇಲಾಖೆ ಹಮ್ಮಿಕೊಂಡಿರುವ 'ದುರ್ಬಲ ವರ್ಗದವರಿಗೆ ಅಗ್ಗದ ದರದಲ್ಲಿ ಸೀರೆ ಮತ್ತು ಪಂಚೆ ವಿತರಣೆ ಯೋಜನೆ' ಯಾವ ಹಂತದಲ್ಲಿದೆ? (ಪ್ರಗತಿಯ ವಿವರಗಳನ್ನು ನೀಡುವುದು)

## ದಾಂಡೇಲಿಯ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ಅಭಿವೃದ್ಧಿ ನಿಗಮದ ಸಾಮಿಲ್‌ನ ಪುನಃಶ್ಚೇತನ

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) –**

೨೩ (೧೭) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ಅಭಿವೃದ್ಧಿ ನಿಗಮದ ದಾಂಡೇಲಿಯ ಜೈಹಿಂದ್ ಸಾಮಿಲ್ ಸ್ವಾತಂತ್ರ್ಯ ಪೂರ್ವದಲ್ಲಿ ಸ್ಥಾಪನೆಗೊಂಡಿದ್ದು, ಇದು ಈಗ ಕಾರ್ಯನಿರ್ವಹಿಸುತ್ತಿದೆಯೇ ;

(ಆ) ಇದ್ದಲ್ಲಿ, ಸಾಮಿಲ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು ;

(ಇ) ಸದರಿ ಸಾಮಿಲ್‌ನಿಂದ ನಿಗಮಕ್ಕೆ ಬರುತ್ತಿರುವ ವಾರ್ಷಿಕ ಉತ್ಪನ್ನವೆಷ್ಟು ;

(ಈ) ಸ್ವಾತಂತ್ರ್ಯ ಪೂರ್ವದಲ್ಲಿ ಸ್ಥಾಪಿತವಾದ ಈ ಸಾಮಿಲ್ಲನ್ನು ಪುನಃಶ್ಚೇತನಗೊಳಿಸಲು ಸರ್ಕಾರ ಚಿಂತನೆ ನಡೆಸಿದೆಯೇ ;

(ಉ) ಬೆಂಗಳೂರಿನ ಘೂಡ್‌ಯಾರ್ಡ್‌ನ ಮಾದರಿಯಲ್ಲಿ ಈ ಸಾಮಿಲ್ಲನ್ನು ಅಭಿವೃದ್ಧಿಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಸರ್ಕಾರಿ ಭೂ ಮಂಜೂರಾತಿ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೪ (೧೧) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಸರ್ಕಾರಿ ಭೂಮಿಯನ್ನು ಯಾವ ಯಾವ ಸಂದರ್ಭಗಳಲ್ಲಿ ಕೃಷಿ, ತೋಟಗಾರಿಕೆ ಮತ್ತು ಪ್ಲಾಂಟೇಶನ್‌ಗಳಿಗಾಗಿ ಮಂಜೂರು ಮಾಡಲಾಗಿದೆ ಮತ್ತು ಎಷ್ಟು ವಿಸ್ತೀರ್ಣ ಮಂಜೂರು ಮಾಡಲಾಗಿದೆ ; (ಜಿಲ್ಲಾವಾರು, ವಿಸ್ತೀರ್ಣವಾರು ವಿವರದೊಂದಿಗೆ ಸರ್ಕಾರಿ ಆದೇಶದ ಪ್ರತಿ ಒದಗಿಸುವುದು)

(ಆ) ಅರ್ಜಿ ನಮೂನೆ ೫೦, ೫೩ ಮತ್ತು ೯೪ ಸಿ ರಡಿಯಲ್ಲಿ ಎಷ್ಟು ಕುಟುಂಬಗಳಿಗೆ ಕೃಷಿ ಮತ್ತು ಕೃಷಿಯೇತರ ಉದ್ದೇಶಗಳಿಗಾಗಿ ಎಷ್ಟು ವಿಸ್ತೀರ್ಣದ ಭೂಮಿಯನ್ನು ಮಂಜೂರು ಮಾಡಲಾಗಿದೆ ; (ಜಿಲ್ಲಾವಾರು, ಕುಟುಂಬವಾರು, ವಿಸ್ತೀರ್ಣವಾರು ವಿವರ ನೀಡುವುದು)

(ಇ) ಸರ್ಕಾರಿ ಭೂಮಿಯನ್ನು ತನ್ನ ಹೆಸರಿಗೆ ವರ್ಗಾಯಿಸಿಕೊಳ್ಳದೆ ಅದರಲ್ಲಿ ಕೃಷಿ ಮಾಡಿದ ರೈತರ ವಶದಲ್ಲಿರುವ ಭೂಮಿಯನ್ನು ಯಾವುದೇ ಸಂದರ್ಭದಲ್ಲಿಯೂ ಸಹ ತೆರವುಗೊಳಿಸಲು ಸರ್ಕಾರಕ್ಕೆ ಸಾಧ್ಯವಿಲ್ಲವೇ ; ಇದ್ದಲ್ಲಿ, ತರಾತುರಿಯ ತೆರವಿನ ಕ್ರಮವೇಕೆ ;

(ಈ) ಸರ್ಕಾರಿ ಭೂಮಿಯನ್ನು ಅಕ್ರಮದಿಂದ ತನ್ನ ಅಥವಾ ತನ್ನ ಕುಟುಂಬ ಸದಸ್ಯರ ಹೆಸರಿಗೆ ಮಾಡಿಕೊಂಡವರ ವಿರುದ್ಧ ಮತ್ತು ಮಾಡಿಕೊಳ್ಳಲು ಸಹಕರಿಸಿದವರ ವಿರುದ್ಧ ಕೈಗೊಂಡ ಕ್ರಮಗಳೇನು ?

## ಕ್ರೀಡಾಂಗಣಗಳ ಸುಸ್ಥಿತಿ

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೫ (೪೨೧) ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಲ್ಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಕ್ರೀಡಾಂಗಣಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಸದರಿ ಕ್ರೀಡಾಂಗಣಗಳು ಸದ್ಯ ಸುಸ್ಥಿತಿಯಲ್ಲಿವೆಯೇ ;

(ಇ) ಸದರಿ ಕ್ರೀಡಾಂಗಣಗಳ ನಿರ್ಮಾಣಕ್ಕೆ ಸರ್ಕಾರ ನೀಡಿದ ಅನುದಾನ ಎಷ್ಟು;

(ಈ) ಸದರಿ ಕ್ರೀಡಾಂಗಣಗಳ ಕಾಮಗಾರಿಗಳು ಯಾವ ಹಂತದಲ್ಲಿವೆ ;

(ಉ) ಪ್ರತಿ ವರ್ಷ ಸದರಿ ಕ್ರೀಡಾಂಗಣಗಳಿಗೆ ನೀಡಲಾಗುತ್ತಿರುವ ನಿರ್ವಹಣಾ ಅನುದಾನ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಊ) ಇಲಾಖೆಯವರು ಸದರಿ ಅನುದಾನವನ್ನು ಸದ್ಬಳಕೆ ಮಾಡಿಕೊಂಡಿರುವರೇ?

## ರಸ್ತೆ ನಿರ್ಮಾಣಕ್ಕೆ ನಿರಾಕ್ಷೇಪಣಾ ಪತ್ರ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೬ (೪೦೬) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬಳ್ಳಾರಿ ತಾಲ್ಲೂಕಿನ ಮೋಕಾ ಗ್ರಾಮದಿಂದ ಯರಗುಡಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಅರಣ್ಯ ಇಲಾಖೆಗೆ ಸೇರಿರುವ ಭೂಮಿ ಇರುವುದು ನಿಜವೇ ;

(ಆ) ಹಾಗಿದ್ದಲ್ಲಿ, ಅಲ್ಲಿ ಲೋಕೋಪಯೋಗಿ ಇಲಾಖೆಗೆ ರಸ್ತೆ ನಿರ್ಮಾಣ ಮಾಡಲು ನೀರಾಕ್ಷೇಪಣಾ ಪತ್ರ ನೀಡಲಾಗಿದೆಯೇ ;

(ಇ) ಇದ್ದಲ್ಲಿ ಯಾವಾಗ ನೀಡಲಾಗಿದೆ ; ಈವರೆಗೂ ನೀಡದಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು ;

(ಈ) ನಿರಾಕ್ಷೇಪಣಾ ಪತ್ರ ಯಾವಾಗ ನೀಡಲಾಗುತ್ತದೆ ?

## ಕೃಷ್ಣಾ ಮೇಲ್ದಂಡೆ ೩ನೇ ಹಂತದ ಯೋಜನೆ

**ಡಾ. ಮತ್ತಿಕಟ್ಟೆ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೨೭ (೪೦೩) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ೩ನೇ ಹಂತದ ಕಾಮಗಾರಿಗಳನ್ನು ಯಾವಾಗ ಪೂರೈಸಲಾಗುವುದು ;

(ಆ) ಯೋಜನೆಯಿಂದಾದ ನಿರಾಶ್ರಿತರಿಗೆ ಪುನರ್‌ವಸತಿ ಒದಗಿಸುವಲ್ಲಿ ಸರ್ಕಾರವು ಯಾವ ಯಾವ ಕ್ರಮಗಳನ್ನು ಕೈಗೊಳ್ಳುತ್ತಿದೆ ?

## ಕಾಡಾನೆ ಹಾವಳಿಯಿಂದ ಬೆಳೆ ಹಾನಿ ಹಾಗೂ ಪರಿಹಾರ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೨೮ (೩೨೬) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಡಾನೆ ಹಾವಳಿಯು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಅವುಗಳ ನಿಯಂತ್ರಣಕ್ಕೆ ಮತ್ತು ಸ್ಥಳಾಂತರಕ್ಕೆ ಸರ್ಕಾರವು ಕೈಗೊಂಡ ಕ್ರಮಗಳೇನು ;

(ಇ) ಕಾಡಾನೆಯ ಹಾವಳಿಯಿಂದ ಬೆಳೆ ಹಾನಿ ಉಂಟಾದ ರೈತರಿಗೆ ಪರಿಹಾರ ಬಾಕಿ ಇರುವುದು ನಿಜವೇ ;

(ಈ) ಬೆಳೆಹಾನಿ ಪರಿಹಾರದ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

## ಅರಣ್ಯ ಭೂಮಿಯ ಒತ್ತುವರಿ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) –**

೨೯ (೩೬೬) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ಎಕರೆ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

(ಆ) ಒತ್ತುವರಿ ಭೂಮಿಯನ್ನು ಸಕ್ರಮೀಕರಣಗೊಳಿಸಲು ಇಲಾಖೆಯಿಂದ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ; ಸಕ್ರಮೀಕರಣಕ್ಕೆ ಯಾವ ಮಾನದಂಡವನ್ನು ಅಳವಡಿಸಲಾಗಿದೆ ;

(ಇ) ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ವತಿಯಿಂದ ಗೇರು ಕೃಷಿಯನ್ನು ಉತ್ತೇಜಿಸಲು ರಾಜ್ಯ ಮಟ್ಟದಲ್ಲಿ ಎಷ್ಟು ಅನುದಾನ ನೀಡಲಾಗಿದೆ ; ಗೇರು ಅಭಿವೃದ್ಧಿ ನಿಗಮದ ವತಿಯಿಂದ ಗೇರುಬೀಜ ಸಂಸ್ಕರಣಾ ಕೇಂದ್ರ ಮತ್ತು ಗೇರುಬೀಜ ಆಮದು/ರಫ್ತು ಮಾಡುವ ಯೋಜನೆ ನಿಗಮದ ಮುಂದೆ ಇದೆಯೇ; ಪ್ರಸ್ತುತ ಎಷ್ಟು ಎಕರೆಗಳಲ್ಲಿ ಗೇರು ಸಸಿಗಳನ್ನು ಕೃಷಿ ಮಾಡಲಾಗಿದೆ? (ವಿವರಣೆ ನೀಡುವುದು)

## ಇನಾಂ ಜಮೀನುಗಳು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೩೦ (೪೩೭) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹಿಂದುಳಿದ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಇನಾಂ ಜಮೀನುಗಳ ಮರು ಮಂಜೂರಾತಿಗಾಗಿ ಅರ್ಜಿ ಸಲ್ಲಿಸಲು ನೀಡಿದ್ದ ಕಾಲಾವಧಿ ಎಷ್ಟು ;

(ಆ) ದಿ: ೩೧.೦೩.೨೦೧೮ವರೆಗೆ ನೀಡಿದ್ದ ಗಡುವಿನೊಳಗೆ ಶೇಕಡಾ ಎಷ್ಟು ಮಂಜೂರಾತಿ ನೀಡಲಾಗಿದೆ.

(ಇ) ಉಳಿಕೆ ಜನರು ಅರ್ಜಿ ಸಲ್ಲಿಸಲು ಕಾಲಾವಧಿ ವಿಸ್ತರಿಸಲಾಗಿದೆಯೇ ; ವಿಸ್ತರಿಸಿದ್ದಲ್ಲಿ, ಅದರ ಕಾಲಾವಧಿ ಏನು ;

(ಈ) ವಿಸ್ತರಿಸಿದ ಕಾಲಾವಧಿಯಲ್ಲಿ ಶೇಕಡಾ ಎಷ್ಟು ಪ್ರಮಾಣದಲ್ಲಿ ಅರ್ಜಿಗಳು ಸಲ್ಲಿಕೆಯಾಗಿವೆ ;

(ಉ) ಕಾಲಾವಧಿ ವಿಸ್ತರಣೆ ಕುರಿತಂತೆ ಯಾವ ರೀತಿಯಲ್ಲಿ ಪ್ರಚಾರ ಕ್ರಮ ಕೈಗೊಳ್ಳಲಾಗಿದೆ ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಪಿ7, ಕಾ.ಸೂ. 835, ಪ್ರತಿಗಳು 1500